ಶ್ರೀ ಜಿ.ಎಸ್.ಸದೇವ ಎಸ್. ದೊಡ್ಡಮೇಟಿ.— ೯೭ ಲಕ್ಷ ರೂಪಾಯಿ ಯೋಜನೆಗಳಿಗೆ ಇಟ್ಟ ಲ್ಯಾಪ್ಸ್ ಆಗಲಿಕ್ಕೆ ಕಾರಣ ಏನು ? ಇದಕ್ಕೆ ಸಂಬಂಧಪಟ್ಟಂತೆ ಅಧಿಕಾರಿಗಳಿಂದ ವಿವರಣೆಯನ್ನು ತರಿಸಿದ್ದೀರಾ ? ಹೇಗೆ ? ಇನ್ನು ರೋಣಾ ತಾಲ್ಲೂಕಿನಲ್ಲಿ ೧೯೮೫-೮೬ರಲ್ಲಿ ೨೮ ಕೆಲಸಗಳನ್ನು ತೆಗೆದು ಕೊಂಡಿದ್ದೀರಿ, ೧೯೮೬-೮೭ರಲ್ಲಿ ೨೨ ಕೆಲಸಗಳನ್ನು ತೆಗೆದುಕೊಂಡಿದ್ದೀರಿ, ಇದರಲ್ಲಿ ಹೊಸ ಕೆಲಸಗಳು ಎಷ್ಟು ? ಇನ್ನು ನನ್ನ (ಈ) ಪ್ರಶ್ನೆಗೆ ಉತ್ತರದಲ್ಲಿ ಇಲ್ಲ ಎಂದು ಹೇಳಿದ್ದೀರಿ ಬಜೆಟ್‌ನಲ್ಲಿ ಸೇರಿಸಬೇಕಾದ ಕೆಲಸಗಳನ್ನು ಕಳುಹಿಸಬೇಕಾದರೆ ಸಂಬಂಧಪಟ್ಟ ಇಂಜಿನಿಯರ್ ಯಾವ ರೀತಿ ಕಳುಹಿಸುತ್ತಿದ್ದಾರೆ. (ಊ)ಗೆ ಉತ್ತರವಾಗಿ ಪ್ರಸಕ್ತ ವ್ಯವಸ್ಥೆ ತೃಪ್ತಿಕರವಾಗಿದೆ ಎಂದು ಹೇಳಿದ್ದೀರಿ. ಆದರೆ ಇನ್ನೂ ಪ್ರಗತಿಯ ಪರಿಶೀಲನೆಯಲ್ಲಿದೆಯೆ ? ಹೇಗೆ ? ಇನ್ನೊಂದು ವಿಚಾರ ಏನೆಂದರೆ ಡಿ.ಪಿ.ಎ.ಪಿ.ನಲ್ಲಿ ಒಂದು ಯೋಜನೆ ಸುಮಾರು ೧ ವರ್ಷದ ಹಿಂದೆ ಕಾಣಿಸಿಕೊಂಡಿತ್ತು. ಅದನ್ನು ಫೆಬ್ರವರಿ ೧೮ನೇ ತಾರೀಖು ಇನ್‌ಫೀಸಿಬಲ್ ಎಂದು ಪರಿಗಣಿಸಿ ವಾಪಸು ಸರ್ಕಾರದವರು ಕಳುಹಿಸಿಕೊಟ್ಟಿದ್ದಾರೆ. ೧೯೮೬-೮೭ನೇ ಸಾಲಿನಲ್ಲಿ ಬಜೆಟ್‌ನಲ್ಲಿ ಮಂಜೂರಾದ ಹಣ ಲ್ಯಾಪ್ಸ್ ಆಗುತ್ತಿದೆ. ಇದರ ಬಗ್ಗೆ ತಾವು ಏನಾದರೂ ಮಾಹಿತಿಯನ್ನು ತರಿಸಿಕೊಂಡು ನೋಡಿದ್ದೀರಾ ?

ಶ್ರೀ ಹೆಚ್. ಡಿ. ದೇವೇಗೌಡ.— ಮಾನ್ಯ ಅಧ್ಯಕ್ಷರೆ, ೮೬-೮೭ರ ಸಾಲಿನಲ್ಲಿ ಯೋಜನೆಗಳನ್ನು ನಿಗದಿತ ಸಮಯದಲ್ಲಿ ಕಾರ್ಯಗತಗೊಳಿಸದೇ ಇರುವುದರಿಂದ ಮಂಜೂರಾದ ಹಣ ಲ್ಯಾಪ್ಸ್ ಆಗುತ್ತಿದೆಯೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಇದು ಏತಕ್ಕೆ ಲ್ಯಾಪ್ಸ್ ಆಗುತ್ತಿದೆ ಎಂದರೆ ೨ ಕೆಲಸಗಳನ್ನು ವರ್ಷದ ಕೊನೆಯಲ್ಲಿ ಮಂಜೂರು ಮಾಡಿದ್ದೇವೆ. ಆದ್ದರಿಂದ ಆ ಹಣ ಖರ್ಚಾಗಿಲ್ಲ. ಎರಡನೆಯದಾಗಿ ಬಜೆಟೆಡ್ ವರ್ಕ್ಸ್‌ಗೆ ಯಾವ ರೀತಿ ಹಣವನ್ನು ಸೇರಿಸಬೇಕೆಂಬುದೂ ಇದೆ. ಗೌರವಾನ್ವಿತ ಸದಸ್ಯರು ಕೇಳಿಕೊಂಡರೆಂಬ ಕಾರಣದಿಂದ ಸುಮಾರು ೮-೧೦ ಕೆಲಸಗಳನ್ನು ಮಾನ್ಯತೆ ಮಾಡಿ ಕಳುಹಿಸಿಕೊಟ್ಟೆವು ಆದರೆ ಕೆಲವು ಟೆಕ್ನಿಕಲಿ ಫೀಸಿಬಲ್ ಅಲ್ಲ ಎಂದು ಸರ್ಕಾರದಿಂದ ವರದಿ ಬಂದಾಗ ನಾವು ಅದನ್ನು ಕೈಬಿಡಲೇಬೇಕು. ಇನ್ನು ಡಿ.ಪಿ.ಎ.ಪಿ.ನಲ್ಲಿ ಒಂದು ಯೋಜನೆ ಇನ್‌ಫೀಸಿಬಲ್ ಎಂದು ಸರ್ಕಾರದಿಂದ ವರದಿ ಬಂದಿದೆ. ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೆ ಅದರ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ. ಆ ಮಾಹಿತಿಯನ್ನು ನಾನು ತರಿಸಿನೋಡುತ್ತೇನೆ. ಬಹುಶಃ ಅಲ್ಲಿ ಒಂದು ಮೈನರ್ ಇರಿಗೇಷನ್ ಸಬ್ ಡಿವಿಜನ್ ಬೇಕೆಂಬ ಉದ್ದೇಶವನ್ನು ಮಾನ್ಯ ಸದಸ್ಯರು ಇಟ್ಟುಕೊಂಡು ಈ ಒಂದು ಪ್ರಶ್ನೆಯನ್ನು ಕೇಳಿದ್ದಾರೆಂದು ನಮಗೆ ಅನ್ನಿಸುತ್ತದೆ. ನಾವು ಕೆಲವು ಯೋಜನೆಗಳನ್ನು ಜಿಲ್ಲಾ ಪರಿಷತ್‌ಗೆ ವರ್ಗ ಮಾಡುತ್ತಿರುವುದರಿಂದ ಅಲ್ಲಿ ಇವುಗಳನ್ನು ಸಮಗ್ರವಾಗಿ ಪರಿಶೀಲಿಸುತ್ತಾರೆ.

ಬೆಂಗಳೂರು ನಗರದಲ್ಲಿರುವ ಬಾಡಿಗೆ ಆಧಾರದ ಸರ್ಕಾರೀ ಕಛೇರಿ ಕಟ್ಟಡಗಳ ಬಗ್ಗೆ

೬೦೬. (ಎ) ಶ್ರೀ ಜಿ. ನಾರಾಯಣಸ್ವಾಮಿ (ಬಿನ್ನಿ ಪೇಟೆ).—ಮಾನ್ಯ ಲೋಕೋಪಯೋಗಿ, ಅಚ್ಚು ಕಟ್ಟು ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ನಗರದಲ್ಲಿರುವ ವಿವಿಧ ಸರ್ಕಾರೀ ಕಛೇರಿಗಳಿಗೋಸ್ಕರ ಬಾಡಿಗೆಗೆ ತೆಗೆದು ಕೊಂಡಿರುವ ಕಟ್ಟಡಗಳ ಒಟ್ಟು ಸಂಖ್ಯೆ ಎಷ್ಟು ?

ಆ) ಈ ಕಟ್ಟಡಗಳಿಗೆ ಮಾಹೆಯಾನ ಕೊಡುತ್ತಿರುವ ಒಟ್ಟು ಬಾಡಿಗೆ ಎಷ್ಟು ?

ಇ) ಈ ರೀತಿ ಖಾಸಗೀ ಕಟ್ಟಡಗಳನ್ನು ಸರ್ಕಾರೀ ಕಛೇರಿಗಳಿಗೆ ಉಪಯೋಗಿಸುವುದನ್ನು ತಪ್ಪಿಸಲು ಸರ್ಕಾರದವರು ಕಾರ್ಯಕ್ರಮಗಳನ್ನೇನಾದರೂ ರೂಪಿಸಿಕೊಂಡಿದ್ದಾರೆಯೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಸಚಿವರು).—

ಅ) ೨೨೫ (ಎರಡು ನೂರು ಇಪ್ಪತ್ತೈದು) ಕಟ್ಟಡಗಳು.

ಆ) ೭,೮೫,೭೮೯ (ಏಳು ಲಕ್ಷ ಎಂಭತ್ತೈದು ಸಾವಿರದ ಏಳು ನೂರ ಎಂಭತ್ತೊಂಬತ್ತು ರೂಪಾಯಿಗಳು ಮಾತ್ರ) ರೂಪಾಯಿಗಳು.

ಇ) ಆದ್ಯತೆ, ಅಗತ್ಯತೆ, ಅನುದಾನ ಲಭ್ಯತೆ ಇವುಗಳಿಗನುಗುಣವಾಗಿ ಹಂತಹಂತವಾಗಿ ಕಛೇರಿ ಕಟ್ಟಡಗಳನ್ನು ನಿರ್ಮಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಅಧ್ಯಕ್ಷರೆ, ತಿಂಗಳಿಗೆ ಲಕ್ಷಾಂತರ ರೂಪಾಯಿಗಳ ಹಣವನ್ನು ಬಾಡಿಗೆ ರೂಪದಲ್ಲಿ ಸರ್ಕಾರೀ ಕಛೇರಿಗಳು ನಡೆಯುತಕ್ಕ ಕಟ್ಟಡಗಳಿಗೆ ಬೇರೆಯವರಿಗೆ ಕೊಡಲಾಗುತ್ತಿದೆ. ಇದಕ್ಕೆ ಬದಲಾಗಿ ನಮ್ಮ ಸರ್ಕಾರೀ ಕಛೇರಿಗಳಿಗೋಸ್ಕರ ಸರ್ಕಾರವೇ ಸ್ವಂತ ಕಟ್ಟಡಗಳನ್ನ ಕಟ್ಟಿಸಿಕೊಂಡರೆ ಖಾಸಗಿ ಯವರಿಗೆ ಲಕ್ಷಾಂತರ ರೂಪಾಯಿಗಳು ಬಾಡಿಗೆ ಕೊಡುವುದನ್ನು ಸರ್ಕಾರವೇ ಉಳಿಸಿಕೊಳ್ಳಬಹುದಲ್ಲವೆ ? ಈ ರೀತಿ ಏತಕ್ಕೆ ಮಾಡಬಾರದು?

ಶ್ರೀ ಹೆಚ್. ಡಿ ದೇವೇಗೌಡ.—ನಾವು ಸರ್ಕಾರೀ ಕಛೇರಿಗಳನ್ನು ನಡೆಸಲು ಖಾಸಗೀ ಕಟ್ಟಡಗಳಿಗೆ ೭,೮೫,೭೮೯ ರೂಪಾಯಿಗಳನ್ನು ಬಾಡಿಗೆಗೋಸ್ಕರ ಕೊಡುತ್ತಿದ್ದೇವೆ. ಆದರೆ ನಮ್ಮ ಕಛೇರಿಗಳಿಗೆ ಬೇಕಾದ ಎಲ್ಲಾ ಕಟ್ಟಡಗಳನ್ನೂ ನಾವೇ ಸ್ವಂತವಾಗಿ ಕಟ್ಟಿಸಿಕೊಳ್ಳಬೇಕಾದರೆ ಬಹಳಷ್ಟು ಹಣವನ್ನು ಒಮ್ಮೆಲೇ ಖರ್ಚು ಮಾಡಬೇಕಾಗುತ್ತದೆ. ಇದು ಸಧ್ಯದ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲದ ಮಾತು ಎಂಬುದು ಮಾನ್ಯ ಸದಸ್ಯರಿಗೂ ಕೂಡ ಗೊತ್ತಿದೆ. ಸಧ್ಯಕ್ಕೆ ಈ ವ್ಯವಸ್ಥೆಯನ್ನೇ ಮುಂದುವರಿಸಿಕೊಂಡು ಹೋಗುತ್ತಾ ನಮ್ಮ ಹಣಕಾಸಿನ ಪರಿಸ್ಥಿತಿ ನೋಡಿಕೊಂಡು ಅಗತ್ಯತೆಯನ್ನು ನೋಡಿಕೊಂಡು ಹಂತಹಂತವಾಗಿ ಸರ್ಕಾರ ಸ್ವಂತ ಕಟ್ಟಡಗಳನ್ನು ನಿರ್ಮಿಸಿಕೊಳ್ಳಲು ವ್ಯವಸ್ಥೆ ಮಾಡಿಕೊಳ್ಳುತ್ತೇವೆಂದು ಮಾತ್ರ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಅಧ್ಯಕ್ಷರು.—ಅಲ್ಪಾವಕಾಲಾವಧಿ ಪ್ರಶ್ನೆ ನಂ. ೧ (೨).

ರಾಜ್ಯ ಸರ್ಕಾರದ ಸಚಿವಾಲಯದಲ್ಲಿ ಪುನರ್ ನೇಮಕಗೊಂಡ ಮಾಜಿ ಸೈನಿಕರ ಬಗ್ಗೆ

೨. ಶ್ರೀ ಜಿ.ವಿ. ಮಂಟೂರ್.—ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯ ಸರ್ಕಾರದ ಸಚಿವಾಲಯದಲ್ಲಿ ಪುನರ್ ನೇಮಕಗೊಂಡ ಮಾಜಿ ಸೈನಿಕರಿಗೆ ಸರ್ಕಾರಿ ವಸತಿ ಗೃಹಗಳನ್ನು ಶೇಕಡಾವಾರು ಎಷ್ಟನ್ನು ಕಾಯ್ದಿರಿಸಲಾಗಿದೆ ?

ಆ) ಈ ಹಿಂದೆ ಇಂಥ ಮಾಜಿ ಸೈನಿಕರಿಗಾಗಿ ಕಾಯ್ದಿರಿಸುವ ಪದ್ಧತಿ ಇದ್ದಲ್ಲಿ ಅದನ್ನು ತೆಗೆದು ಹಾಕಲು ಕಾರಣವೇನು ?

ಇ) ಸದರಿ ಪದ್ಧತಿಯನ್ನು ಕೂಡಲೇ ಜಾರಿಗೊಳಿಸಲಾಗುವುದೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು).—

ಅ) ಸರ್ಕಾರಿ ಸೇವೆಯಲ್ಲಿರುವ ಮಾಜಿ ಸೈನಿಕರಿಗಾಗಿ ರಾಜಾಜಿನಗರ ಮತ್ತು ಹೊಂಬೇಗೌಡ ನಗರ ಬಡಾವಣೆಯಲ್ಲಿರುವ ವಸತಿ ಗೃಹಗಳಲ್ಲಿ ಶೇಕಡ ೯ರಷ್ಟು ಕಾಯ್ದಿರಿಸಲಾಗಿದೆ :

ಆ) ಈ ಪದ್ಧತಿಯನ್ನು ತೆಗೆದು ಹಾಕಿಲ್ಲ, ಇನ್ನೂ ಜಾರಿಯಲ್ಲಿದೆ.

ಇ) ಉದ್ಭವಿಸುವುದಿಲ್ಲ.

ಶ್ರೀ ಎ ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ. ಮತ್ತು ಇದರ ಜೊತೆಗೆ ೧೩ನೇ ತಾರೀಖಿನ ೧೧ನೇ ಪಟ್ಟಿಯನ್ನೂ ಕೂಡ ಸಭೆಯ ಮುಂದೆ ಮಂಡಿಸಬಯಸುತ್ತೇನೆ.

ಅಧ್ಯಕ್ಷರು.—ಪಟ್ಟಿಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.